ಲಾಭ ಅವರಿಗೂ ಸಿಗಬಹುದು! ಈಗ, ರಚನ್ ಚರ್ಮಣ! ಅವ್ನಿಗೆ ಹೆಣ್ಣು ಹುಚ್ಚು!! ಒಮ್ಮೆ ಮಹಿಳಾ ಸಹೋದ್ಯೋಗಿಯೊಂದಿಗೆ, ಇನ್ನೊಮ್ಮೆ ವಿದ್ಯಾರ್ಥಿನಿಯೊಂದಿಗೆ ಅನುಚಿತವಾಗಿ ವರ್ತಿಸಿ, ಮೆಮೊ ಪಡೆದಿದ್ದ. ಪ್ರಕರಣ ಗ್ರಾಮೀಣ ಪೊಲೀಸ್ ಠಾಣೆಯ ಮೆಟ್ಟಿಲೂ ಏರಿತ್ತು. ಅದರ ಪತ್ರಿಕಾ ವರದಿಗಳು ನನ್ನ ಬಳಿ ಇವೆ. ಮತ್ತೆ ಆಡಳಿತ ಮಂಡಳಿ ರಾಜಿ ಮಾತುಕತೆ ಮೂಲಕ ಅದನ್ನು ಹೇಗೋ ಮುಚ್ಚಿಹಾಕಿತ್ತು. ಅದ್ಕೆ ಕಾರಣ ಆತನೊಬ್ಬ ಒಳ್ಳೆಯ ಅಧ್ಯಾಪಕ ಅಂತ."

"ಓಹ್! ಈ ವಿಚಾರವನ್ನು ಸುಭಾಷಿಣಿ ಹೇಳಲೇ ಇಲ್ಲ!!"

"ಸುಭಾಷಿಣಿ? ಯಾರಾಕೆ?" ನಾನು ಕೇಳಿದೆ.

"ಆತನ ಹೆಂಡ್ತಿ."

"ಸುಭಾಷಿಣಿ ಯಾಕೆ ಎರಡು ದಿನ ತಡ ಮಾಡಿದಳು ದೂರು ಕೊಡೋಕೆ?"

ಅಧಿಕಾರಿ ಮತ್ತೆ ಅಚ್ಚರಿಗೊಳಗಾದ.

"ಡಿಸೋಜ, ಪತ್ರಿಕೆಲಿ ಬಂದಿತ್ತಲ್ಲ. ಆಕೆ ದೂರು ಕೊಟ್ಟಿದ್ದು ಕಾಣೆಯಾದ ಎರಡು ದಿನಗಳ ನಂತ್ರ! ಯಾಕೆ ಅಂತ ವಿಚಾರಿಸಿದಿರಾ?"

"ಕೇಳ್ದೆ. ಕಾಲೇಜಿನಿಂದ ಎನ್‌ಎಸ್‌ಎಸ್ ಕ್ಯಾಂಪಿಗೆ ಹೋಗಲಿಕ್ಕುಂಟೆಂದು ಹೇಳಿದ್ದನಂತೆ. ಅದಿಕ್ಕೇ ಹೋಗಿರಬೇಕು ಎಂದು ಭಾವಿಸಿದ್ದಳಂತೆ. ಅವನೇಕೆ ಬರಲಿಲ್ಲ ಅಂತ ವಿಚಾರಿಸಿ ಕಾಲೇಜಿನಿಂದ ಫೋನು ಬಂದಾಗಲೇ ಅವ್ನು ಹೋಗಿಲ್ಲ ಎನ್ನುವುದು ಗೊತ್ತಾಗಿದ್ದಂತೆ! ಅವ್ನ ಮೊಬೈಲ್ ಸ್ವಿಚ್ ಆಫ್ ಆಗಿದೆ. ಅದು ಕೊನೇಗೆ ಪತ್ತೆಯಾಗಿದ್ದು ಹೈದರಾಬಾದ್‌ನಲ್ಲಿ! ಅವ್ನು ಅಲ್ಲಿಗೆ ಏಕೆ ಹೋದ?" ಅಧಿಕಾರಿ ಮಾತು ಜೋಡಿಸಿದ.

"ರಚನ್‌ನ ಫೋನು ಹೈದರಾಬಾದಿನಲ್ಲಿ ಎಷ್ಟು ಹೊತ್ತಿಗೆ ಪತ್ತೆಯಾಗಿದೆ?"

"ಸುಮಾರು ರಾತ್ರಿ ಹತ್ತೂವರೆಯ ಹೊತ್ತಿಗೆ"

"ಅವ್ನು ಮನೆ ಬಿಟ್ಟಿದ್ದು ಎಷ್ಟು ಗಂಟೆಗೆ ಅನ್ನೋದು ಗೊತ್ತಾ?"

"ಬೆಳಿಗ್ಗೆ ಏಳು ಗಂಟೆಗೆಲ್ಲಾ ಬ್ಯಾಗ್ ಹಿಡಿದುಕೊಂಡು ಕ್ಯಾಂಪಿಗೆ ಅಂತ ಹೋಗಿದ್ದನಂತೆ."

"ನಿಮ್ಮ ತನಿಖೆಯಿಂದ ಏನೂ ಲಾಭವಾಗಲಿಲ್ಲವೆ?"

"ಚುಟುಕಾಗಿ ವಿಷ್ಯ ತಿಳಿಸ್ತೀನಿ. ಅವ್ನ ಚರವಾಣಿಯ ವಿವರಗಳನ್ನು ಜಾಲಾಡಿದ್ದೇವೆ. ಆತನಿಗೆ ಯಾವ್ದೇ ಅಪರಿಚಿತ ಸಂಖ್ಯೆಗಳಿಂದ ಕರೆ ಬಂದಿಲ್ಲ. ಆತನಿಗೆ ಬಂದ ಕೊನೆಯ ಕರೆ ಅವ್ನ ಮಿತ್ರನೊಬ್ಬನಿಂದ. ಅವನನ್ನು ವಿಚಾರಿಸ್ದೆ. ಆತ ರಚನ್‌ನ ವಾಕಿಂಗ್ ಫ್ರೆಂಡ್ ಅಂತೆ. ಆ ದಿನ ಸಂಜೆ ಬರೋಕಾಗೋಲ್ಲ ಅಂತ ಫೋನು ಮಾಡಿದ್ದಂತೆ. ಕಾಲೇಜಿನಲ್ಲೂ ಗಮನಾರ್ಹ ಸುದ್ದಿಯೇನೂ ಸಿಗಲಿಲ್ಲ, ಒಂದು ಚಿಕ್ಕ ವಿಚಾರದ ಹೊರತಾಗಿ. ಅದೇನೂ ಮುಖ್ಯ ಅಂತ ನನಗನಿಸೋಲ್ಲ."

"ಕೆಲವೊಮ್ಮೆ ಚಿಕ್ಕ ವಿವರಗಳು ದೊಡ್ಡ ರಹಸ್ಯದ ಸುಳಿವು ನೀಡ್ತವೆ, ಡಿಸೋಜ"

"ವಾರದ ಹಿಂದೆ ಅವ್ನು ಕ್ಯಾಂಪಿನ ದಿನಾಂಕವನ್ನು ಮೂರು ದಿವಸ ಮುಂದೂಡಬೇಕೆಂದು ಭಾರೀ ಒತ್ತಾಯಿಸಿದ್ನಂತೆ. ಕ್ಯಾಂಪಿನ ಸಂಯೋಜಕರ ಜೊತೆ ಮಾತಿನ ಚಕಮಕಿಯೂ ನಡೀತಂತೆ. ಆದ್ರೆ ಪ್ರಾಂಶುಪಾಲರು ಮುಂದೂಡಲು ನಿರಾಕರಿಸಿದ್ದರಿಂದ, ತಾನು ಪ್ರತ್ಯೇಕವಾಗಿಯೇ ನಾಪೋಕ್ಲುವಿನಲ್ಲಿದ್ದ ಕ್ಯಾಂಪಿಗೆ ಬರ್ತೀನಿ ಅಂತ ಹೇಳಿದನಂತೆ. ಆದ್ರೆ ಎರಡು ದಿನವಾದ್ರೂ ಆತ ಬರದೇ ಇದ್ದದ್ದು ನೋಡಿ, ಅವ್ನಿಗೆ ಫೋನು ಮಾಡ್ದಾಗ ಸ್ವಿಚ್ ಆಫ್ ಅಂತ ಬಂತೆಂದು, ಮನೆಗೆ